

‘ಯಾಂತ್ರಿಕ ಬುದ್ಧಿಮತ್ತೆ’ (ಯಾಂಬು) ಈ ಹೊತ್ತಿನ ಯಕ್ಷಪ್ರಶ್ನೆಗಳಲ್ಲೊಂದು! ಕೆಲವರ ಕಣ್ಣಿಗೆ ‘ಯಾಂಬು’ ವರದಂತೆ ಕಾಣುತ್ತಿದ್ದರೆ, ಮತ್ತೆ ಕೆಲವರಿಗೆ ಬಾಂಬಿನಂತೆ ಕಾಣಿಸುತ್ತಿದೆ. ಚಾಟ್ ಜಿಪಿಟಿಯ ಪ್ರಚಂಡ ಸಾಮರ್ಥ್ಯದ ಬಗ್ಗೆ ಮೆಚ್ಚುಗೆ ವ್ಯಕ್ತವಾದಂತೆಯೇ, ‘ಯಾಂಬು’ ಕಾರಣದಿಂದಾಗಿ ಕೆಲಸ ಕಳೆದುಕೊಳ್ಳುವವರ ಸಂಖ್ಯೆಯೂ ಹೆಚ್ಚುತ್ತಿದೆ. ಹಾಗಾದರೆ, ಈ ಯಾಂತ್ರಿಕ ಬುದ್ಧಿಮತ್ತೆಯ ಅಸಲಿಯತ್ತೇನು? ಅದೇನು ಅಮೃತವಾ? ವಿಷವಾ?

■ ಗುರುರಾಜ್ ಎಸ್‌ ದಾವಣಗೆರೆ

# ಯಾಂತ್ರಿಕ ಬುದ್ಧಿಮತ್ತೆ V/s ಮಾನವ ಬುದ್ಧಿಮತ್ತೆ

## ಹೊಸ ಸಂಘರ್ಷಕ್ಕೆ ಮುನ್ನುಡಿಯೆ?

**ಘಟನೆ 1**

ಮಾರ್ಚ್ 28, 2023. ಪಂಜಾಬ್–ಹರ್ಯಾಣದ ಹೈಕೋರ್ಟ್‌ನಲ್ಲಿ ಹಿಂದೆಂದೂ ನಡೆದಿರದ, ಊಹಿಸದಿದ್ದ ಘಟನೆ ನಡೆದುಹೋಯಿತು. ಜಸ್ವಿಂದರ್ ಸಿಂಗ್ ಎಂಬ ಕೊಲೆಗಾರ ತಮ್ಮ ರಕ್ಷಣಾ ವಕೀಲರ ಮೂಲಕ ಮಧ್ಯಂತರ ಜಾಮೀನಿಗೆ ಅರ್ಜಿ ಹಾಕಿದ್ದ. ಎರಡೂ ಕಡೆಯ ವಾದ ಆಲಿಸಿದ ನ್ಯಾಯಾಧೀಶ ಅನೂಪ್ ಚಿತ್ಕಾರ ಅಪರಾಧಿಗೆ ಮಧ್ಯಂತರ ಜಾಮೀನು ನೀಡಬೇಕೇ ಬೇಡವೇ ಎಂಬುದನ್ನು ನಿರ್ಧರಿಸಲು ‘ಚಾಟ್ ಜಿಪಿಟಿ’ಯ ಮೊರೆ ಹೋದರು. ನ್ಯಾಯಾಧೀಶರ ಮನವಿ ಸ್ವೀಕರಿಸಿದ ಚಾಟ್ ಜಿಪಿಟಿಯು, ‘ಅಪರಾಧಿಯ ಕೃತ್ಯವು ಅತ್ಯಂತ ಕ್ರೌರ್ಯದಿಂದ ಕೂಡಿದ್ದರೆ ಜಾಮೀನು ನೀಡುವ ಅಗತ್ಯವಿಲ್ಲ ಮತ್ತು ಸೂಕ್ತವೂ ಅಲ್ಲ. ಹಾಗೊಂದು ವೇಳೆ ನೀಡಲೇಬೇಕೆನಿಸಿದರೆ ದೊಡ್ಡ ಮೊತ್ತದ ಹಣವನ್ನು ಬಾಂಡ್ ರೂಪದಲ್ಲಿಡಬೇಕೆಂದು ಆದೇಶಿಸಿ ನಂತರ ಜಾಮೀನು ನೀಡಬಹುದು’ ಎಂದಿತು. ‘ಅಪರಾಧಿಯು ಜೈಲಿನಿಂದ ಹೊರಗಿರುವಾಗ ಇತರರಿಗೆ ಯಾವುದೇ ಅಪಾಯವಿಲ್ಲ ಎಂದು ತೀವ್ರವಾಗಿ ಅನ್ನಿಸಿದರೆ ಮಾತ್ರ ಬೇಲ್ ನೀಡಬಹುದು, ಇಲ್ಲದಿದ್ದರೆ ಇಲ್ಲ’ ಎಂದೂ ಸಲಹೆ ನೀಡಿತು. ಚಾಟ್ ಜಿಪಿಟಿಯ ಸಲಹೆ ಪಾಲಿಸಿದ ನ್ಯಾಯಾಧೀಶರು ಅಪರಾಧಿಗೆ ಜಾಮೀನು ನಿರಾಕರಿಸಿದರು. ಕೃತಕ ತಂತ್ರಜ್ಞಾನದ ನೆರವು ಪಡೆದು ನ್ಯಾಯಾಲಯ ನಿರ್ಣಯ ನೀಡಿರುವುದು ಭಾರತದ ಇತಿಹಾಸದಲ್ಲಿ ಇದೇ ಮೊದಲು.

**ಘಟನೆ 2**

ಕೆರಿಯರ್ ಗೈಡೆನ್ಸ್ ಕಾರ್ಯಕ್ರಮಕ್ಕೆ ಸಂಬಂಧಿಸಿದಂತೆ ಮಾತನಾಡಲು ಕರೆ ಮಾಡಿದ್ದ ‘ಟಾಪರ್ಸ್ ಐಎಎಸ್ ಅಕಾಡೆಮಿ’ಯ ಸೋಮಶೇಖರ್ ಹುಲಮನಿಯವರು, ‘ಸರ್ ನಿಮ್ಮ ಪ್ರಜಾವಾಣಿ ಲೇಖನ ಚೆನ್ನಾಗಿತ್ತು, ಅದರ ಧ್ವನಿಮುದ್ರಿತ ವರ್ಷನ್ ಕಳಿಸಿದ್ದೆ, ಕೇಳಿಸಿಕೊಂಡಿರಾ? ಎಂದರು. ‘ಹೌದು, ಕೇಳಿಸಿಕೊಂಡೆ. ಮಾತನಾಡಿದವರ ಧ್ವನಿ ಚೆನ್ನಾಗಿದೆ, ಯಾರವರು?’ ಎಂದೆ. ‘ಅದು ಮನುಷ್ಯರ ಧ್ವನಿಯಲ್ಲ ಸರ್, ಯಾಂತ್ರಿಕ ಬುದ್ಧಿಮತ್ತೆ–ಎಐ (Artificial Intelligence) ಉಪಯೋಗಿಸಿ ಮಾಡಿಸಿದ್ದು’ ಎಂದರು. ಅಚ್ಚರಿಯಾಯಿತು.

**ಘಟನೆ 3**

ಈ ವರ್ಷಾರಂಭದಲ್ಲಿ, ಪ್ರಿನ್ಸ್‌ಟನ್ ಯುನಿವರ್ಸಿಟಿಯ ಕಂಪ್ಯೂಟರ್ ಸೈನ್ಸ್ ಪ್ರಾಧ್ಯಾಪಕ ಅರವಿಂದ ನಾರಾಯಣನ್, ತಮ್ಮ ನಾಲ್ಕು ವರ್ಷದ ಮಗಳಿಗೆ ನೆರವಾಗಲೆಂದು ‘ಎಐ’ ಆಧಾರಿತ ಚಾಟ್ ಜಿಪಿಟಿಯೊಂದನ್ನು ಸಿದ್ಧಮಾಡಿಕೊಟ್ಟು, ‘ಯಾವ ಪ್ರಶ್ನೆ ಬೇಕಿದ್ದರೂ ಕೇಳು, ಅದು ಉತ್ತರಿಸುತ್ತದೆ’ ಎಂದರು. ತಂದೆ ಅರವಿಂದರು ‘ನಿನ್ನೊಂದಿಗೆ ಸಂವಾದಿಯಾಗಿರುವುದು ಕಿರಿಯ ಪ್ರಾಯದ ಹೆಣ್ಣು ಮಗು’ ಎಂದು ನಿರ್ದೇಶನ ನೀಡಿದ್ದರು. ಮಗಳು ತಾನು ಇಷ್ಟ ಪಡುವ ಪ್ರಾಣಿ, ಪಕ್ಷಿ, ಮರ–ಗಿಡಗಳ ಬಗ್ಗೆ ಪ್ರಶ್ನೆ ಕೇಳಿದಾಗ ಮಗುವಿಗೆ ಹಿತವಾದ ಧ್ವನಿಯಲ್ಲಿ ಸರಿಯಾದ ಉತ್ತರಗಳು ದೊರೆತವು. ‘ತನ್ನೊಂದಿಗೆ ವ್ಯವಹರಿಸುತ್ತಿರುವುದು ಎಳೆಯ ಮಗು ಎಂದರಿತಿದ್ದ ಚಾಟ್ ಜಿಪಿಟಿ, ಅತ್ಯಂತ ಕಾಳಜಿಯಿಂದ ನಡೆದುಕೊಂಡದ್ದನ್ನು ನಾನು ನಂಬದಾದೆ’ ಎಂದಿರುವ